International Journal of Kannada Research
www.kannadajournal.com

ISSN: 2454–5813
IJKR 2017; 3(4): 01-02
© 2017 IJKR
www.kannadajournal.com
Received: 01-08-2017
Accepted: 02-09-2017

**ರಾಜಶ್ರೀ ಶ್ರೀರಾಮ (ಭುರೆ)**
ಅತಿಥಿ ಉಪನ್ಯಾಸಕಿ, ಸಂಗೀತ ಎಂ.ಎ. ಕೋರ್ಸು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

**Correspondence**
**ರಾಜಶ್ರೀ ಶ್ರೀರಾಮ (ಭುರೆ)**
ಅತಿಥಿ ಉಪನ್ಯಾಸಕಿ, ಸಂಗೀತ ಎಂ.ಎ. ಕೋರ್ಸು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

# ವಾದ್ಯಯಂತ್ರಗಳ ನಿರ್ಮಾಣ ಮತ್ತು ಇವುಗಳ ಬೆಳವಣಿಗೆ

**ರಾಜಶ್ರೀ ಶ್ರೀರಾಮ (ಭುರೆ)**

ಸಂಗೀತವು ಹಾರ್ಮೋನಿಯಂ, ತಬಲಾ ಮತ್ತು ವಾದ್ಯಯಂತ್ರಗಳಿಂದ ಸಮಧುರವಾದ ಸಂಗೀತವೆನಿಸಿಕೊಳ್ಳುತ್ತದೆ. ಈ ವಾದ್ಯಯಂತ್ರಗಳ ಉತ್ಪತ್ತಿ ಅತೀ ಪ್ರಾಚೀನ. ಶಂಕರನ ಡಮರುಗ ಪ್ರಪ್ರಥಮ ವಾದ್ಯವೆಂದು ಪುರಾಣಗಳಿಂದ ಅರಿಯಬಹುದಾಗಿದೆ. ಶಿವನು ನಾದಪ್ರಿಯನೂ, ವೇದಪ್ರಿಯನೂ ಆಗಿದ್ದಾನೆ. ಈತನಿಂದಲೇ ಲಲಿತ ಕಲೆಗಳು ಸೃಷ್ಟಿಯಾದವೆಂದು ಇತಿಹಾಸದಿಂದ ಅರಿತುಕೊಳ್ಳಬಹುದು. ಈ ಲಲಿತ ಕಲೆಗಳಿಂದ ನಾವು ಶಿವನ ಆರಾಧನೆ ಮಾಡಿ, ಈತನನ್ನು ಸಂತೃಪ್ತಿಗೊಳಿಸಿ ನಮ್ಮ ಸಕಲ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುತ್ತೇವೆ.

ವಾದ್ಯಯಂತ್ರಗಳನ್ನು ಪ್ರಾಚೀನರು ಐದು ಭಾಗವಾಗಿ ವಿಂಗಡಣೆ ಮಾಡಿದ್ದಾರೆ. ಅವುಗಳು– ತತ, ಬಿತತ, ಸುಷಿರ, ಘನ, ಅವನದ್ಧಗಳಾಗಿವೆ.

ಸಕಲ ಚರಾಚರ ಜೀವಿಗಳಲ್ಲಿ ಪರಮಾತ್ಮನಿರುತ್ತಾನೆ ಎಂಬುದು ನಂಬಿಕೆ. ಪ್ರತೀ ವಸ್ತುವು ಕೂಡಾ ಅವನಿಂದಲೇ ನಿರ್ಮಾಣಗೊಂಡಿದೆ ಎಂದು ಅರಿಯುತ್ತೇವೆ. ಇದೇ ರೀತಿ ವಾದ್ಯಗಳು ಕೂಡಾ ಅವನಿಂದಲೇ ನಿರ್ಮಾಣಗೊಂಡಿದೆ ಎಂದು ಅರಿಯುತ್ತೇವೆ. ಇದೇ ರೀತಿ ವಾದ್ಯಗಳು ಕೂಡಾ ಬೆಳಕಿಗೆ ಬಂದವುಗಳಾಗಿವೆ. ಒಮ್ಮೆ ಮದಾಂಧನಾದ ಅಂಧಕಾಸುರನು ಯುದ್ಧದಲ್ಲಿ ದೇವತೆಗಳನ್ನು ಸೋಲಿಸಿ, ಹುಚ್ಚನಾಗಿ ಜಗತ್ತಿನಲ್ಲಿ ನನ್ನ ಜಯಿಸುವವರು ಯಾರೂ ಇಲ್ಲವೆಂದು ಕೈಲಾಸಕ್ಕೆ ಭೇಟಿ ನೀಡಿ ಶಿವನನ್ನೇ ಯುದ್ಧಕ್ಕೆ ಬಾ ಎಂದು ಕರೆದನು. ಆಗ ಕುಪಿತಗೊಂಡ ಶಿವನು ಅಂಧಕಾಸುರನ ಜೊತೆ ಯುದ್ಧ ಮಾಡಿ ತ್ರಿಶೂಲದಿಂದ ಘಾಸಿಗೊಳಿಸಿ ಅಂಧಕನನ್ನು ಮೇಲೆತ್ತಿದ್ದನು. ಆಗ ರಕ್ಕಸನು ಶಿವನ ಮಸ್ತಕವನ್ನು ನೋಡಿ ಪಾಪದಿಂದ ದೂರವಾದನು. ಆಗ ಅಂಧಕನು ಶಿವನನ್ನು ಕುರಿತು ಹೇ ಶಿವ, ನಿನ್ನ ಮಸ್ತಕವನ್ನು ಕಂಡು ಧನ್ಯನಾದೆ, ನನಗೆ ಹುಟ್ಟು–ಸಾವು, ಭವ–ಭಯಗಳಿಲ್ಲ. ಕಾರಣ ಮುಕ್ತಿ ನನಗೆ ನೀಡಬೇಕೆಂದು ಭಿನ್ನವಿಸಲು, ಶಿವನು ಸಂತೃಪ್ತಗೊಂಡು ನಿನ್ನಿಷ್ಟ ಬೇಡೆನಲು ಶಿವನು ಆನಂದ ತುಂದಿಲನಾಗಿ ಒಂದು ತಗ್ಗನ್ನು ತೋಡಿ ಅದರ ಮೇಲೆ ಅಂಧಕಾಸುರನ ಚರ್ಮವನ್ನು "ಶಿವ ತಾಂಡವ ನೃತ್ಯ"ವನ್ನು ಮಾಡಿದನು. ಅದರ ಕುರುಹಾಗಿ ನಗಾರಿ ವಾದ್ಯವು ಉತ್ಪತ್ತಿಯಾಯಿತು. ಈಗಲೂ ಕೂಡಾ ಈ ನಗಾರಿಗಳನ್ನು ಅನೇಕ ದೇವಾಲಯಗಳಲ್ಲಿ, ಪೂಜಾ ಸಮಯಕ್ಕೆ ನಗಾರಿ ಬಾರಿಸುವುದನ್ನು ಕಾಣುತ್ತೇವೆ. ಬಹಳ ವರ್ಷಗಳ ತರುವಾಯ 'ಡೊಳ್ಳು' ಎಂಬ ವಾದ್ಯ ಉತ್ಪತ್ತಿಯಾಯಿತು.

ಈ ಡೊಳ್ಳು ಅನೇಕ ದೇವರ ಕಾರ್ಯಗಳಿಗೆ ಬಳಸುವರೇ ವಿನಾ ಬೇರೆ ಯಾವ ಕಾರಣಕ್ಕೂ ಉಪಯೋಗವಿಲ್ಲ.

ಡೊಳ್ಳು ಕಾಲಾಂತರಗಳಲ್ಲಿ ಪರಿವರ್ತಿತವಾಗಿ 'ಮದ್ದಳೆ' ವಾದ್ಯವಾಯಿತು. ಇದನ್ನು ನಂದಿ ಮೊದಲಾದ ದೇವಗಣಗಳು ಬಾರಿಸುತ್ತಿದ್ದವೆಂದು ದೇವತೆಗಳಲ್ಲಿ ನಂದಿ ಮೊದಲಾದ ದೇವಗಣಗಳು ಬಾರಿಸುತ್ತಿದ್ದವೆಂದು ಪುರಾಣದಲ್ಲಿ ಉಲ್ಲೇಖಗಳಿವೆ. ಈ ಮದ್ದಳೆಯು ಮೆಚ್ಚಿಗೆ ಪಡೆದು ಲೋಕದಲ್ಲೆಲ್ಲಾ ಪಸರಿಸಿತು. ಇದು ವೇದಕಾಲದಿಂದ ಹಿಡಿದು ಮಧ್ಯಕಾಲ, ಮಹಾಭಾರತ ಗ್ರಂಥದಲ್ಲಿ ಉಲ್ಲೇಖವಿದೆ ಎಂದು ತಿಳಿದು ಬರುತ್ತದೆ. ಅನೇಕ ಶಿಲಾಶಾಸನಗಳಲ್ಲಿ ಕೂಡಾ ಈ ಮದ್ದಳೆಯ ಚಿತ್ರಕೆತ್ತನೆ ಕಾಣಬಹುದು. ಅಲ್ಲಮಪ್ರಭು ಈ ಮದ್ದಳೆ ಬಾರಿಸುವುದರಲ್ಲಿ ಚತುರನಾಗಿದ್ದನು. ಈ ಕಾರಣಕ್ಕಾಗಿ ಈತನನ್ನು 'ಮದ್ದಳೆ ಅಲ್ಲಮ' ಎನ್ನುವರು.

ಮನುಷ್ಯನ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು ಅವನ ಅರಿವಿಗೆ ಬಾರದಂತೆ ಕಾರ್ಯನಿರ್ವಹಿಸುತ್ತವೆ. ಅದೇ ರೀತಿ ತಾಳಕ್ಕೂ ಕೂಡ ದಶ ಪ್ರಾಣಿಗಳಿರುತ್ತವೆ. ಯಾವುದೇ ತಾಳ ಪ್ರಾರಂಭವಾಯಿತೆಂದರೆ ಅದರ ಜೊತೆಯಲ್ಲಿ 10 ಪ್ರಾಣಗಳ ಸಹಜ ಕ್ರಿಯೆ ನಡೆಯುತ್ತಿರುತ್ತದೆ. ಅವುಗಳೆಂದರೆ ಕಾಲ, ಮಾರ್ಗ, ಕ್ರಿಯಾ, ಅಂಗ, ಗ್ರಹ, ಜಾತಿ, ಕಳಾ, ಲಯ, ಯತಿ, ಪ್ರಸ್ತಾರ. ಈ 10 ಪ್ರಾಣಿಗಳಲ್ಲಿ ಮದ್ದಳೆ ಯತಿಯ ಪ್ರಾಣಕ್ಕೆ ಪ್ರಾಧಾನ್ಯತೆ ಪಡೆದಿದೆ.

ಈ ರೀತಿ ಮದ್ದಳೆ ನಾನಾ ರೂಪ ತಾಳಿತು. ಇದಕ್ಕೆ ಬೇರೆ ಬೇರೆ ಹೆಸರುಗಳಿವೆ. ಈ ಮದ್ದಳೆ ಪರಿವರ್ತನೆಗೊಂಡು ಮೃದಂಗವಾಯಿತು. ವೀಣೆಯಿಂದ ಸಿತಾರ ಹುಟ್ಟಿತು. ಬಿಸ್ಮಿಲ್ಲಾಖಾನರಿಂದ ಸನಾದಿ ಪರಿವರ್ತನೆಗೊಂಡು 'ಶಹನಾಯಿ' ಆಯಿತು. ಅದೇ ರೀತಿ ಮದ್ದಳೆ ರೂಪಗೊಂಡು ಮೃದಂಗವಾಯಿತು. ಕರ್ನಾಟಕ ಸಂಗೀತದಲ್ಲಿ ಮೃದಂಗ ಅತೀ ಪ್ರಮುಖ ಸ್ಥಾನ ಪಡೆಯಿತು. ಭರತನಾಟ್ಯಕ್ಕೆ ಮೃದಂಗವು ಹಾಲು-ಜೇನು ಬೆರೆತಂತೆ ಅತ್ಯಂತ ಜೋಡಣೆಯಾಗಿದೆ.

ಇದೇ ರೀತಿ ವೀಣಾ, ವೇಣು, ವಂಶಿ, ತಂಬೂರಿ. ಹೀಗೆ ಅನೇಕ ವಾದ್ಯಗಳ ಉತ್ಪತ್ತಿಯಾಗಿ, ಬೆಳೆದು ಬಂದಿವೆ. ಇವೆಲ್ಲವು ಜನಮನ್ನಣೆ ಪಡೆದ ವಾದ್ಯಗಳಾಗಿವೆ.

## ಆಧಾರ ಗ್ರಂಥ

1. ತಬಲಾ ವಾದನ ತರಂಗ-ಪಂ. ಸೋಮಶೇಖರ ಪಾಟೀಲ ಬೇನೂರ